# ಶ್ರೀವ್ಯಾಸರಾಜರು




ಅರ್ಥಿಕಲ್ಪಿತಕಲ್ಪೋಽಯಂ ಪ್ರತ್ಯರ್ಥಿಗಜಕೇಸರೀ ।
ವ್ಯಾಸತೀರ್ಥಗುರುರ್ಭೂಯಾದಸ್ಮದಿಷ್ಟಾರ್ಥ ಸಿದ್ಧಯೇ ॥

ಬೇಡುವವರಿಗೆ ಕಲ್ಪವೃಕ್ಷದಂತಿರುವ, ಪ್ರತಿವಾದಿಗಳೆಂಬ ಆನೆಗಳಿಗೆ ಸಿಂಹದಂತಿರುವ ವ್ಯಾಸತೀರ್ಥರು ನನ್ನ ಅಭೀಷ್ಟಗಳನ್ನು ಪೂರೈಸಲಿ. **( ಆ ರಾ ಧ ನೆ : ಫಾ ಲ್ಗು ಣ ಮಾ ಸ ಕೃ ಷ್ಣ ಪ ಕ್ಷ ಚ ತು ರ್ಥಿ )**

- ಮೂಲರೂಪ – ಶಂಕುಕರ್ಣ–ಬ್ರಹ್ಮದೇವರ ಪೂಜೆಗೆ ಹೂವು, ತುಳಸೀ ತರುವುದು ಮುಖ್ಯ ಕಾರ್ಯ
- ಬ್ರಹ್ಮದೇವರಿಂದ ಶಾಪ – ಬ್ರಹ್ಮದೇವರ ಪೂಜೆಗೆ ತರಬೇಕಾಗಿದ್ದ ತುಳಸಿಪುಷ್ಪವನ್ನು ಒಮ್ಮೆ ಶಂಕುಕರ್ಣ ತರಲಿಲ್ಲ. ಆದರಿಂದ ಕೋಪಗೊಂಡ ಬ್ರಹ್ಮನಿಂದ ಶಾಪ – "ನೀನು ಅಸುರನಾಗಿ

ಜನಿಸು" ಎಂದು. ಆದ್ದರಿಂದಲೇ ಶಂಕುಕರ್ಣನು ಪ್ರಹ್ಲಾದರಾಜನಾಗಿ ಹಿರಣ್ಯಕಶಿಪುವಿನ ಮಗನಾಗಿ ಜನನ. ಮೊದಲನೇ ಅವತಾರ.

- ನಂತರ ಕೌರವರ ಪಡೆಯಲ್ಲಿ ಬಾಹ್ಲೀಕ ಮಹಾರಾಜನಾಗಿ ಜನನ – ಅಲ್ಲಿ ಭೀಮಸೇನ ದೇವರು ಅವರನ್ನು ಸಂಹಾರ ಮಾಡುತ್ತಾರೆ.
- **ನಂತರದ ಅವತಾರವೇ – ನಮ್ಮ ಶ್ರೀವ್ಯಾಸರಾಜರು.**
- ಜನನ - 1447 ಏಪ್ರಿಲ್ 22 ಪ್ರಭವ ಸಂವತ್ಸರ ವೈಶಾಖ ಶುದ್ದ ಸಪ್ತಮಿ ಭಾನುವಾರ
- ಜನನ ಸ್ಥಳ – ಮೈಸೂರು ಜಿಲ್ಲೆ ಕಾವೇರಿ ತೀರದ ಬನ್ನೂರು ಗ್ರಾಮ
- ಜನ್ಮ ನಾಮ – ಯತಿರಾಜ
- ಆಶ್ರಮ ಗುರುಗಳು – ಶ್ರೀ ಬ್ರಹ್ಮಣ್ಯತೀರ್ಥರು, ಅಬ್ಬೂರು
- ವಿದ್ಯಾ ಗುರುಗಳು – ಶ್ರೀ ಶ್ರೀಪಾದರಾಜರು
- ಗೋತ್ರ – ಕಾಶ್ಯಪ ಗೋತ್ರ
- ತಂದೆ - ರಾಮಾಚಾರ್ಯ (ಬಲ್ಲಣ್ಣ ಸುಮತಿ)
- ತಾಯಿ – ಸೀತಾಬಾಯಿ (ಅಕ್ಕಮ್ಮ, ಲಕ್ಷ್ಮಿ)
- ವಿದ್ಯಾಗುರುಗಳು – ಶ್ರೀಪಾದರಾಜ ತೀರ್ಥರು
- ಅಂಕಿತ – ಸಿರಿಕೃಷ್ಣ, ಶ್ರೀಕೃಷ್ಣ
- ವೃಂದಾವನ – ನವವೃಂದಾವನ, ಆನೆಗೊಂದಿ (ಗಜಗಹ್ವೇಶ್ವರ ಕ್ಷೇತ್ರ)
- ಪುಣ್ಯತಿಥಿ – ಫಾಲ್ಗುಣ ಬಹುಳ ಚತುರ್ಥಿ
- ಪೂರ್ವಾದಿಮಠವೇ – ಇಂದಿನ ವ್ಯಾಸರಾಜಮಠ. ವ್ಯಾಸರಾಜರ ಪೂರ್ವದಲ್ಲಿ ಈ ಮಠಕ್ಕೆ ಪೂರ್ವಾದಿಮಠವೆಂಬ ಹೆಸರಿತ್ತು. ಅದೇ ನಂತರ ವ್ಯಾಸರಾಜ ಮಠವಾಯಿತು.

## ಶ್ರೀವ್ಯಾಸರಾಜರು ಬ್ರಹ್ಮಣ್ಯತೀರ್ಥರ ಅನುಗ್ರಹದಿಂದ ಜನಿಸಿದರು -

ಒಮ್ಮೆ ಅಬ್ಬೂರು ಮಠದ ಪರಮ ಶಿಷ್ಯರಾಗಿದ್ದ ಸೀತಾಬಾಯಿಯವರು ತಮ್ಮ ಪತಿ ನಿಧನವಾದ್ದರಿಂದ, ಸಹಗಮನ ಮಾಡಲು ಅನುಮತಿಗಾಗಿ ಅಬ್ಬೂರಿನಲ್ಲಿ ಬ್ರಹ್ಮಣ್ಯತೀರ್ಥರ ಬಳಿ ಬಂದು, ನಮಸ್ಕರಿಸಿದಾಗ ಶ್ರೀಗಳವರು "ದೀರ್ಘಸುಮಂಗಲೀಭವ" ಎಂದು ಮುತ್ತೈದೆಯರಿಗೆ ಆಶೀರ್ವಾದಿಸುವಂತೆ ಆಶೀರ್ವದಿಸಿದರು. ಆದರೆ ಅವರಿಗೆ ಸೀತಾಬಾಯಿ ಇನ್ನೂ ತನ್ನ ಗಂಡ ಸತ್ತ ವಿಷಯ ತಿಳಿಸಿರಲಿಲ್ಲ. ಆಗ ಜನರೆಲ್ಲರೂ, ವಿಪ್ರರೆಲ್ಲರೂ ಆಶ್ಚರ್ಯಪಟ್ಟು ನಿಜವಾದ ಸಂಗತಿ ತಿಳಿಸಿದಾಗ, "ನನ್ನ ಬಾಯಿಂದ "ದೀರ್ಘಸುಮಂಗಲೀ" ಎಂದು ಬಂದಾಯಿತು, ನನ್ನ ನಾಲಿಗೆಯಲ್ಲಿ ನುಡಿಸಿದವನು ವಿಠಲನು. ನನ್ನಲ್ಲಿ ಸನ್ಯಾಸಧರ್ಮವಿದ್ದರೆ, ನನ್ನ ಮಾತು ಸತ್ಯವಾಗಬೇಕು, ಇಲ್ಲವಾದಲ್ಲಿ ಸ್ತ್ರೀಹತ್ಯಾದೋಷ–ವಿಠಲನಿಗೆ ಹತ್ಯಾ ದೋಷ ಎರಡೂ ಸಂಭವಿಸಬೇಕಾಗುತ್ತದೆ, ನಿನ್ನ ಪತಿ ಮೃತನಾದ ಸ್ಥಳ ತೋರಿಸು" ಎಂದು ಹೊರಟರು. ಆದರೆ ಶ್ರೀಗಳವರ ಶಿಷ್ಯರು ಸ್ವಾಮಿಗಳಿಗೆ ಮೃತದೇಹವನ್ನು ನೋಡಲು ಬಿಡಲಿಲ್ಲ, (ಕಾರಣ – ಶ್ರೀಗಳವರು ಶವವನ್ನು ನೋಡಬಾರದು.) ಸ್ವಾಮಿಗಳು ಒಪ್ಪದೆ ನೇರವಾಗಿ ಹೆಣದ ಬಳಿ ಬಂದು ಕಮಂಡಲೋದಕವನ್ನು ಮೃತದೇಹದ ಮೇಲೆ ಮಂತ್ರೋಚ್ಚಾರಣೆ ಮಾಡಿ ಪ್ರೋಕ್ಷಿಸಲು ರಾಮಾಚಾರ್ಯರು ನಿದ್ದೆಯಿಂದ ಎದ್ದಂತೆ, ಎದ್ದು ನಿಂತು ನಮಸ್ಕರಿಸಲು, ಸ್ವಾಮಿಗಳು "ಸುಪುತ್ರಾ ಪ್ರಾಪ್ತಿರಸ್ತು" ಎಂದು ಆಶೀರ್ವದಿಸಿದರು. ಆಗಲೇ ವೃದ್ಧದಂಪತಿಗಳಾಗಿದ್ದ ಅವರಿಗೇ ಆಶ್ಚರ್ಯವಾಯಿತು. "ನಿಮಗೆ ಹುಟ್ಟಿದ ಮೊದಲ ಮಗುವನ್ನು ನಮಗೇ ನೀಡಬೇಕು" ಎಂದರು ಸ್ವಾಮಿಗಳು. ಕೆಲಕಾಲದಲ್ಲಿಯೇ ಸೀತಾಬಾಯಿ ಗರ್ಭವತಿಯಾದಳು. ಈ ಸುದ್ದಿ ತಿಳಿದ ಬ್ರಹ್ಮಣ್ಯತೀರ್ಥರು ಪ್ರಸವಕಾಲದಲ್ಲಿ ಭೂಸ್ಪರ್ಶವಾಗದಂತೆ ಶಿಶುವನ್ನು ತರಬೇಕೆಂದು ಬಂಗಾರದ ಹರಿವಾಣವನ್ನು ಕಳುಹಿಸಿದರು. ಹೀಗೆ ಜನಿಸಿದ ಶಿಶುವನ್ನು ಅಪರೋಕ್ಷ ಜ್ಞಾನಿಗಳಾದ ಬ್ರಹ್ಮಣ್ಯತೀರ್ಥರು ಕಣ್ವನದಿಯ ತೀರ್ಥದಲ್ಲಿ ಅದನ್ನು ತೊಳೆದು, ಕೃಷ್ಣನ ಮುಂದೆ ಮಲಗಿಸಿ, ಅದನ್ನು ಸಂರಕ್ಷಿಸಿದರು. ಮುಂದೆ ಆ ಮಗುವಿಗೆ ಆಶ್ರಮ ನೀಡಿ "ವ್ಯಾಸತೀರ್ಥ" ಎಂದು ಹೆಸರಿಟ್ಟರು.

ಹೀಗೆ ಬ್ರಹ್ಮಣ್ಯತೀರ್ಥರು ನೀಡಿದ ಮಹೋನ್ನತ ಕಾಣಿಕೆಯೇ ನಮ್ಮ ಕಥಾನಾಯಕರಾದ – ವ್ಯಾಸರಾಜರು.

## ಕಂಚಿಯಲ್ಲಿ ಅರಳಿದ ವ್ಯಾಸರಾಜರು –

ಆಗಿನ ಕಾಲದಲ್ಲಿ "ಕಂಚಿ" ವೇದಾಂತ ವಿದ್ಯೆಯ ವಿಶ್ವವಿದ್ಯಾನಿಲಯವಾಗಿತ್ತು. ವ್ಯಾಸತೀರ್ಥರು ತಮ್ಮ ಸಂಚಾರ ಕ್ರಮದಲ್ಲಿ ಅಲ್ಲಿಗೆ ಆಗಮಿಸಿದರು. ಕಾಂಚೀನಗರದ ಸಾರಸ್ವತ, ಪಾಣಿನೀಯ, ಶಾಕಟಾಯನಾದಿ ವೈಯಾಕರಣಿಗಳಿಂದಲೂ, ಚಾರ್ವಾಕಾದಿಗಳಿಂದಲೂ, ಮಹಾ ಪಂಡಿತರಿಂದಲೂ, ಸಂಶೋಧಕರಿಂದಲೂ, ಬಹಳ ಪ್ರಖ್ಯಾತವಾಗಿತ್ತು. ಇಂತಹ ವಿದ್ಯಾಕೇಂದ್ರದಲ್ಲಿ ವ್ಯಾಸತೀರ್ಥರು ಬಂದ ಕೆಲವೇ ದಿನಗಳಲ್ಲಿ ತಮ್ಮ ವಿದ್ಯಾಪ್ರಭೆಯಿಂದ ವಿಖ್ಯಾತರಾದರು. ಚಿಕ್ಕವಯಸ್ಸಿನ ವ್ಯಾಸತೀರ್ಥರನ್ನು ಕೆಣಕಬೇಕೆಂದು ಬಂದ ಕಂಚಿಯ ಪಂಡಿತರು ಇಡೀ ಮಧ್ವಸಿದ್ಧಾಂತವನ್ನು ಒಂದೇ ಮಾತಿನಲ್ಲಿ ಹೇಳಿರಿ ಎಂದಾಗ, ವ್ಯಾಸರಾಜರು ಹೀಗೆಂದರು –

**ಶ್ರೀಮಧ್ವಮತಪ್ರಮೇಯನವರತ್ನಮಾಲಿಕಾ**

**ಶ್ರೀಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ ತತ್ವತೋ ।**
**ಭೇದೋ ಜೀವಗಣಾ ಹರೇರನುಚರಾಃ ನೀಚೋಚ್ಚಭಾವಂ ಗತಾಃ ॥**
**ಮುಕ್ತಿರ್ನೈಜಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಂ**
**ಹ್ಯಕ್ಷಾದಿತ್ರಿತಯಂ ಪ್ರಮಾಣಮಖಿಲಾಮ್ನಾಯೈಕವೇದ್ಯೋ ಹರಿಃ ॥**

ಶ್ರೀಮನ್ಮಧ್ವಸಿದ್ಧಾಂತದಲ್ಲಿ –

(೧) ಶ್ರೀಹರಿಯೇ ಸರ್ವೋತ್ತಮನು

(೨) ಪ್ರಮಾಣ ಪ್ರಮಿತವಾದ ಈ ಜಗತ್ತು ಪಾರಮಾರ್ಥತಃ ಸತ್ಯವು

(೩) ಜೀವೇಶ್ವರ ಭೇದ, ಜಡೇಶ್ವರ ಭೇದ, ಜೀವ–ಜಡಭೇದ, ಜೀವ–ಜೀವಭೇದ, ಜಡ–ಜಡ ಭೇದಗಳೆಂಬ ಭೇದಪಂಚಕವು ಪಾರಮಾರ್ಥಿಕವು

(೪) ಸಾತ್ವಿಕ, ರಾಜಸ, ತಾಮಸರೆಂಬ ತ್ರಿವಿಧ ಜೀವರುಗಳು ಯಾವಾಗ್ಯೂ ಶ್ರೀಹರಿಯ ಅಧೀನರು (೫) ಸ್ವಭಾವತಃ ತಾರತಮ್ಯದಲ್ಲಿ ಇರುವವರು

(೬) ಸ್ವರೂಪಭೂತಾನಂದಾನುಭವವೇ ಸಾತ್ವಿಕರಿಗೆ ಮುಕ್ತಿಯು

(೭) ಪರಮ ನಿರ್ಮಲ ವಿಷ್ಣು ಭಕ್ತಿಯೇ ಆ ಮುಕ್ತಿಯ ಸಾಧನವು

(೮) ಪ್ರತ್ಯಕ್ಷ, ಅನುಮಾನ, ಆಗಮಗಳೆಂದು ಪ್ರಮಾಣಗಳು ಮೂರೇ

(೯) ಶ್ರೀಹರಿಯೇ ಅಖಿಲ ಸದಾಗಮಗಳಿಂದ ಪರಮ ತಾತ್ಪರ್ಯಪೂರ್ವಕ ಮುಖ್ಯ ಪ್ರತಿಪಾದ್ಯನು, ಎಂದು ಈ ಪ್ರಮೇಯ ನವರತ್ನಗಳು ಪ್ರಕಾಶಿಸುತ್ತವೆ.

ಹೀಗೆ ಹೇಳಿ ಸಮರ್ಥವಾಗಿ ಮಧ್ವಸಿದ್ಧಾಂತವನ್ನು ಪ್ರತಿಪಾದಿಸಿದರು. ಅವರ ಪಾಂಡಿತ್ಯಕ್ಕೆ ಮೆಚ್ಚಿ ಮಾರುಹೋದ ವಿಷ್ಣುಕಂಚಿಯ ವಿದ್ವಾಂಸರು ವ್ಯಾಸರಾಜರನ್ನು ದಿವ್ಯವಾದ ಪಲ್ಲಕ್ಕಿಯಲ್ಲಿ ಕೂಡಿಸಿ, ದೇವಾಲಯದ ಸಕಲ ಸಾಂಪ್ರದಾಯಿಕ ವೈಭವದೊಡನೆ, ವಾದ್ಯ–ವೇದಘೋಷದಿಂದ ಪೂರ್ಣಕುಂಭದೊಡನೆ, ವರದರಾಜಸ್ವಾಮಿ ದೇವಾಲಯಕ್ಕೆ ಕರೆದೊಯ್ದರು.

ತರುಣ ಸನ್ಯಾಸಿಗಳಾದ ಶ್ರೀವ್ಯಾಸತೀರ್ಥರ ಪ್ರಭಾವವನ್ನು ಸೈರಿಸಲಾರದೆ, ಕೆಲವು ಪರಾಜಿತರಾಗಿದ್ದ ವಿದ್ವಾಂಸರು ಒಂದುದಿನ ಪೂಜೆಯಾದ ನಂತರ ಪ್ರಸಾದ ಸ್ವೀಕರಿಸುವಾಗ, ಅಡಿಗೆಯವನೊಡನೆ ಸೇರಿ ಪಿತೂರಿಮಾಡಿ ವಿಷಪ್ರಾಶನ ಮಾದಿಸಿದರು. ಸ್ವಾಮಿಗಳು ಅದನ್ನು ನೈವೇದ್ಯವೆಂದು ಸ್ವೀಕರಿಸಿದರು. ಆದರೆ ಭಗವದರ್ಪಣವಾದ ಆ ವಿಷಾಹಾರ ಶ್ರೀಗಳವರನ್ನು ಏನೂ ಮಾಡಲಿಲ್ಲ, ಅದು ಅವರಿಗೆ ಅಮೃತವಾಯಿತು. ಪರಮಾತ್ಮನಿಗೆ ನೈವೇದಿಸಿದ ಮೇಲೆ ಪರಮಾತ್ಮ ಅದರ ಅಸಾರವಾದ ಪದಾರ್ಥಗಳನ್ನೆಲ್ಲ ತೆಗೆದು ಬಿಡುತ್ತಾನೆ.

ಅಲ್ಲಿಂದ ಹೊರಟ ವ್ಯಾಸರಾಜರು ತಮ್ಮ ಆಶ್ರಮ ಗುರುಗಳಾದ ಬ್ರಹ್ಮಣ್ಯತೀರ್ಥರ ಆಶಯದಂತೆ ಮುಳುಬಾಗಿಲಿನ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಶ್ರೀಪಾದರಾಜರಲ್ಲಿಗೆ ಹೊರಟರು.

ಶ್ರೀಪಾದರಾಜರ ಬಳಿ ತರ್ಕ, ವ್ಯಾಕರಣ, ನ್ಯಾಯ, ಛಂದಸ್ಸು, ಮೀಮಾಂಸ, ಷಡ್ದರ್ಶನಗಳನ್ನೂ ಕಲಿಯಲು ಆರಂಭಿಸಿದರು ಶ್ರೀವ್ಯಾಸರಾಜರು. ಕ್ರಮೇಣ ಶ್ರೀಮನ್ಯಾಯಸುಧಾ ಗ್ರಂಥದ ಪಾಠವು ಮುಗಿದಂತೆಲ್ಲಾ, ಅವರ ಜ್ಞಾನ ಮತ್ತು ಕಾಂತಿ ಮತ್ತಷ್ಟು ಹೆಚ್ಚಾಗುತಿತ್ತು.

## ಶೇಷರೂಪದಿಂದ ಪದ್ಮನಾಭತೀರ್ಥರ ಅನುಗ್ರಹ -

ಪ್ರತಿದಿನ ಪಾಠಪ್ರವಚನಾದಿಗಳ ನಂತರ, ಮುಳುಬಾಗಿಲಿನ ನೃಸಿಂಹತೀರ್ಥದ ಹಿಂಬಾಗದ ಗುಹೆಯಲ್ಲಿ ಕುಳಿತು ಆಯಾ ದಿನದ ಪಾಠಗಳನ್ನು ಮನನ ಮಾಡುತ್ತ ಇದ್ದರು. ಹೀಗೆ ಒಂದು ದಿನ ಅಭ್ಯಾಸ

ಮಾಡುತ್ತಿದ್ದಾಗ, ಒಂದು ಘಟಸರ್ಪವು ಅವರನ್ನು ಸುತ್ತುವರೆದಿದ್ದು ಕಾಣಿಸಿ, ಅದನ್ನು ನೋಡಿದ ಅಪರೋಕ್ಷ ಜ್ಞಾನಿಗಳಾದ ಶ್ರೀಪಾದರಾಜರು ಯೋಚಿಸಲು, ಅದು ಸರ್ಪರೂಪದ ಯತಿವರ್ಯರಂತೆ ಗೋಚರವಾಯಿತು. ಶ್ರೀಪಾದರಾಜರು ಅಂತರ್ಗತರಾಗಿ ಧ್ಯಾನದೃಷ್ಟಿಯಲ್ಲಿ ನೋಡಲು, ತಮ್ಮ ಮಠದ ಮೂಲಪುರುಷರೂ ಆದ ಶ್ರೀಪದ್ಮನಾಭತೀರ್ಥರೇ ಎನ್ನುವಂತೆ ಭಾಸವಾಯಿತು. ದಿವ್ಯಯೋಗಶಕ್ತಿಯಿಂದ ಚಿತ್ತೈಕಾಗ್ರತೆಯಿಂದ ಸರ್ಪಭಾಷೆಯಲ್ಲೇ ಆ ಸರ್ಪವನ್ನು ಮಾತನಾಡಿಸಿದರು. ಸರ್ಪರೂಪದ ಯತಿಶ್ರೇಷ್ಟರು – ವ್ಯಾಸರಾಯರು ಮುಂದೆ ಮಹತ್ಕಾರ್ಯಗಳನ್ನು ಸಾಧಿಸಬೇಕಾಗಿರುವುದರಿಂದ ಅವರನ್ನು ಆಶೀರ್ವದಿಸಿ ಅನುಗ್ರಹಿಸಲು ಬಂದಿರುವುದಾಗಿ ತಿಳಿಸಿ, ತಮ್ಮ ಆಗಮನ ಹಾಗೂ ಸ್ಪರ್ಶದ ಸಾನ್ನಿಧ್ಯದಿಂದಾಗಿ ಮುಂದೆಂದಿಗೂ ಶ್ರೀ ವ್ಯಾಸರಾಯರಿಗೆ ಶತ್ರುಗಳ ವಿಷಭಾದೆ ಮುಂದೆಂದಿಗೂ ತಟ್ಟುವುದಿಲ್ಲ ಎಂದು ಹೇಳಿ ಕಣ್ಮರೆಯಾಯಿತು.

ತಮ್ಮ ಶಿಷ್ಯನ ಬಗ್ಯೆ ಹೆಮ್ಮೆಯಿಂದ ಗುರುಗಳಾದ ಶ್ರೀಪಾದರಾಜರೇ ಹೊಗಳಿದ ಪರಿ ಈರೀತಿ ಇದೆ –

**ರಾ ಗ – ಪೂ ರ್ವಿ : ತಾ ಳ – ಆ ದಿ ತಾ ಳ**

| | | |
|---|---|---|
| **ಇದಿರದಾವನು ನಿನಗೀ ಧರೆಯೊಳು** | **। ಪದುಮನಾಭನ ದಾಸ ಪರಮೋಲ್ಲಾಸ** | **। ಪ ।** |
| **ವಾದಿತಿಮಿರ ಮಾರ್ತಾಂಡನೆಂದೆನಿಸಿದೆ** | **। ವಾದಿಶರಭ ಭೇರುಂಡ ವ್ಯಾಸರಾಯ** | **। ೧ ।** |
| **ಯತಿಗಳೊಳು ನಿನ್ನಂದದವರುಗಳ** | **। ಪ್ರತಿಗಾಣೆ ಈ ಕ್ಷಿತಿಯೊಳು ಯತಿರಾಯ** | **। ೨ ।** |
| **ಹಮ್ಮನಳಿದು ಶ್ರೀಪತಿ ರಂಗವಿಟ್ಠಲನ್ನ ಸುಮ್ಮಾನದಿಂ ಸೇವಿಪ ವ್ಯಾಸಮುನಿರಾಯ** | | **। ೩ ।** |

## ಸ್ವಪ್ನದಲ್ಲಿ ಸೂಚನೆ –

ಒಮ್ಮೆ ವ್ಯಾಸರಾಜರು ಪಂಡರಾಪುರದಲ್ಲಿ ಬಿಡಾರ ಹೂಡಿ ಮಧ್ವ ಸಿದ್ಧಾಂತ ಪ್ರಚಾರಕಾರ್ಯದಲ್ಲಿದ್ದಾಗ, ವಿಠಲನು ಸ್ವಪ್ನದಲ್ಲಿ ಕಾಣಿಸಿಕೊಂಡು ಪಂಡರಾಪುರಕ್ಕೆ ಬರಬೇಕೆಂದು ಪಾಂಡುರಂಗನು ಆಹ್ವಾನವಿತ್ತಂತೆ ಗೋಚರವಾಯಿತು. ಅದೇರೀತಿ ಶ್ರೀಪಾದರಾಜರಿಗೆ ಭೀಮರಥಿ ಪುಷ್ಪಾವತಿ ಸಂಗಮ ಕ್ಷೇತ್ರದಲ್ಲಿ ಪಾಂಡವ ವಂಷೀಯನಾದ ಶ್ರೀಕ್ಷೇಮಕಾಂಟ ಮಹಾರಾಜನು ಒಂದು ದೇವರ ಪೆಟ್ಟಿಗೆಯನ್ನು ಭೂಸ್ಥಾಪನ ಮಾಡಿರುವುದಾಗಿ ತಿಳಿಸಿ ಅದನ್ನು ಪಡೆದು ಪ್ರತಿನಿತ್ಯ ಪೂಜಿಸಲು ಆದೇಶ ಮಾಡಿದಂತಾಯಿತು.

ಅದರಂತೆ ಮಾರನೇ ದಿನ ಭೂಗರ್ಭದಲ್ಲಿ ಒಂದು ದೇವರ ಪೆಟ್ಟಿಗೆ ದೊರೆಯಿತು. ಅದರಲ್ಲಿ ಎರಡು ಸಂಪುಟಗಳು ದೊರೆತವು. ಒಂದನ್ನು ತೆಗೆದು ನೋಡಿದಾಗ ಶ್ರೀ ಜಾಂಬವತೀದೇವಿಯರಿಂದ, ನಂತರ ಅರ್ಜುನನಿಂದ ಬಹುಕಾಲ ಪೂಜಿತನಾಗಿದ್ದ ರುಕ್ಮಿಣೀಸತ್ಯಭಾಮಾಸಹಿತ ಶ್ರೀರಂಗವಿಠಲಮೂರ್ತಿಯ ದರ್ಶನವಾಯಿತು. ಅದುವರೆಗೂ ತಮ್ಮ ಕನ್ನಡ ದೇವರನಾಮಗಳನ್ನು “ಗೋಪೀನಾಥ” ಎಂಬ ಅಂಕಿತದಲ್ಲಿ ರಚಿಸುತ್ತಿದ್ದ ಶ್ರೀಪಾದರಾಜರು ಈ ಮೂರ್ತಿ ದೊರೆತಮೇಲೆ “ರಂಗವಿಠಲ” ಅಂಕಿತದಿಂದ ಪದ–ಪದ್ಯ, ಸುಳಾದಿ, ಉಗಾಭೋಗ, ರಚಿಸಲು ಆರಂಭಿಸಿದರು.

## ವ್ಯಾಸರಾಜರೆದುರು ವೇಣುನಾದಮಾಡಿ ನರ್ತನ ಮಾಡಿದ ಕೃಷ್ಣ –

ಒಮ್ಮೆ ಶ್ರೀಪಾದರಾಜರು ತಮ್ಮ ಪ್ರಿಯಶಿಷ್ಯ ವ್ಯಾಸರಾಜರಿಗೆ ಪ್ರತಿಮೆಗಳ ಪೂಜೆ ಆರಂಭಿಸಲು ಹೇಳಿ ಸ್ನಾನಗೃಹದತ್ತ ಹೊರಟರು. ಪೂಜೆಗೆ ಒಂದೊಂದನ್ನಾಗಿ ಅಣಿಗೊಳಿಸಿದರು. ಅಲ್ಲಿದ್ದ ಸಂಪುಟಗಳಲ್ಲಿ ಒಂದನ್ನು ಅಲ್ಲಿಯವರೆಗೂ ಯಾರೂ ತೆಗೆದಿರಲಿಲ್ಲ. ಶ್ರೀವ್ಯಾಸರಾಜರು ಆ ಸಂಪುಟದ ಮುಚ್ಚಳವನ್ನು (ಪಂಡರಾಪುರದಲ್ಲಿ ಶ್ರೀಪಾದರಾಜರಿಗೆ ದೊರಕಿದ ಸಂಪುಟ) ತೆಗೆದಾಗ ಒಳಗಿನಿಂದ ಉದ್ಭವಿಸಿದಂತೆ ಕಂಡ ವೇಣುಗೋಪಾಲ ಮೂರ್ತಿಯು ಕೊಳಲನ್ನು ಬಾರಿಸುತ್ತಾ ಕುಣಿಯಲಾರಂಭಿಸಿದನು. ರುಕ್ಮಿಣಿ ಸತ್ಯಭಾಮಾಸಹಿತ ಶ್ರೀಗೋಪಾಲಕೃಷ್ಣನ ದಿವ್ಯಮೂರ್ತಿಯ ಪವಿತ್ರ ಸಂದರ್ಶನದಿಂದ ಆನಂದಾತಿರೇಕದಿಂದ ಹರ್ಷಗೊಂಡರು. ಪರಮತ್ಮನೆದುರು ಭಗವದ್ದರ್ಶನದಿಂದ ಪರವಶರಾಗಿದ್ದ ಶ್ರೀ ವ್ಯಾಸರಾಜರೆದುರು ವೇಣುಗೋಪಾಲನು ಕೊಳಲನ್ನು ಊದುತ್ತಾ ದಿವ್ಯ ಮನೋಹರ ನರ್ತನ ಮಾಡಲಾರಂಭಿಸಿದನು. ಆಗ ಅಲ್ಲಿಯೇ ಇದ್ದ ಸಾಲಿಗ್ರಾಮಗಳನ್ನು ತಾಳಗಳಂತೆ ಬಡಿಯುತ್ತಾ ಕೃಷ್ಣನೊಂದಿಗೇ ಮೈಮರೆತು ಭಾವಾವೇಶದಲ್ಲಿ ಅವನ ಅನಂತ ಮಹಿಮಾತಿಶಯಗಳನ್ನು ಹಾಡುತಾ ತಾವೂ ಕುಣಿಯಲಾರಂಭಿಸಿದರು. – “ಕಾಳಿಂಗನಾ ಮೆಟ್ಟಿ ನಾಟ್ಯವನಾಡಿದ”..

ಹೀಗೆ ಹಾಡುತ್ತಾ ಕುಣಿದುಕೊಂಡು ಸಾಲಿಗ್ರಾಮದಲ್ಲೇ ತಾಳ ಬಡಿಯುತ್ತಿದ್ದಾಗ ಸುತ್ತಮುತ್ತಲಿನ ಶಿಷ್ಯವೃಂದ ಅಚ್ಚರಿಗೊಂಡು ಶ್ರೀಪಾದರಾಜರ ಬಳಿ ಓಡಿಹೋಗಿ ಶ್ರೀವ್ಯಾಸರಾಜರ ಪೂಜಾವೈಭವದ ವಿಚಿತ್ರ ವರ್ತನೆಯನ್ನು ವಿಜ್ಞಾಪಿಸಿಕೊಂಡರು. ಕೂಡಲೇ ಶ್ರೀಪಾದರಾಜರು ಧಾವಿಸಿ ಬಂದು ಸ್ವಲ್ಪ ದೂರದಿಂದಲೇ ನಿಂತು ಬಗ್ಗಿ ನೋಡಿದರು. ಸುಪ್ರೀತನಾಗಿದ್ದ ಶ್ರೀ ವೇಣುಗೋಪಾಲಕೃಷ್ಣನು ನರ್ತನ ಮಾಡುತ್ತಿರುವುದು, ವ್ಯಾಸರಾಜರು ತಮಗರಿವಿಲ್ಲದೆಯೇ ಹಾಡುತ್ತಾ ಕುಣಿಯುತ್ತಿರುವುದೂ ಕಾಣಿಸಿತು. ಶ್ರೀಪಾದರಾಜರ ಪೂರ್ಣ ದೃಷ್ಟಿ ನಾಟ್ಯವಾಡುತ್ತಿದ್ದ ಮೂರ್ತಿಯಮೇಲೆ ಹರಿಯುವಷ್ಟರಲ್ಲಿ ತಾನು

ಯಾವ ಭಂಗಿಯಲ್ಲಿ ನಾಟ್ಯವಾಡುತ್ತಿದ್ದನೋ ಅದೇ ಭಂಗಿಯಲ್ಲಿ ಸ್ವಾಮಿಯು ನಿಂತನು. ಪರಮಾತ್ಮನು ತನ್ನ ಬಲಪಾದದ ಮೇಲೆ ಎಡಪಾದವನ್ನಿಟ್ಟು ಅಪೂರ್ವವೆನಿಸುವ ರೀತಿಯಲ್ಲಿ ಥಟ್ಟನೆ ನಿಂತು ದಿವ್ಯ ಘಟನೆಯನ್ನು ಕಣ್ಣಾರೆ ಕಂಡು ವ್ಯಾಸರಾಜರನ್ನು "ನೀವು ಅತ್ಯಂತ ಪುಣ್ಯಶಾಲಿಗಳು. ಭೀಮಾನದಿಯ ತೀರದಲ್ಲಿ ದೊರೆತ ಎರಡು ಸಂಪುಟಗಳಲ್ಲಿ ಒಂದರಲ್ಲಿ ರಂಗವಿಠಲ ನಮಗೊಲಿದ. ಈಗ ವೇಣುಗೋಪಾಲನು ನಿಮ್ಮನ್ನು ಮೆಚ್ಚಿ ನಿಮ್ಮ ಜ್ಞಾನಭಕ್ತಿ ವೈರಾಗ್ಯಗಳಿಗೆ ಸಂಪೂರ್ಣ ಒಲಿದಿದ್ದಾನೆ. ಸ್ವಾಮಿಯ ಈ ಅಮೂಲ್ಯ ವಿಗ್ರಹವನ್ನು ನೀವೇ ಸ್ವೀಕರಿಸಿ, ಪರಮಾತ್ಮನ ಸೇವೆಯನ್ನು ನಡೆಸಿಕೊಂಡು ಬನ್ನಿ" ಎಂದು ಆ ವಿಗ್ರಹಗಳ ಸಂಪುಟವನ್ನು ವ್ಯಾಸಯತಿಗಳಿಗೊಪ್ಪಿಸಿದರು.

**ಪಟ್ಟಾಭಿಷೇಕ –**

ಹೀಗೆ ವಿದ್ಯಾಗುರುಗಳಾದ ಶ್ರೀಪಾದರಾಜರ ದಿವ್ಯಸನ್ನಿಧಿಯಲ್ಲಿ ಸಮಸ್ತ ಮಾಧ್ವಶಾಸ್ತ್ರವನ್ನೂ ಕಲಿತ ಶ್ರೀವ್ಯಾಸರಾಜರಿಗೆ ಬ್ರಹ್ಮಣ್ಯತೀರ್ಥರು ಒಂದು ಸುಮುಹೂರ್ತದಲ್ಲಿ ಗೌರವದೊಡನೆ ವ್ಯಾಸಮುಷ್ಟಿಯ ಸಂಪುಟವನ್ನು ಚಿನ್ನದ ಹರಿವಾಣದಲ್ಲಿಟ್ಟು, ವ್ಯಾಸರಾಜರ ತಲೆಮೇಲಿರಿಸಿ, ಪಟ್ಟಾಭಿಷೇಕ ಮಹೋತ್ಸವವನ್ನು ನೆರವೇರಿಸಿ ಮುಂದಿನ ಮಠಾಧಿಪತಿಗಳೆಂದು ಘೋಷಿಸಿದರು.

ತಿರುಪತಿಯಲ್ಲಿ ತಿಮ್ಮಪ್ಪನ ಸನ್ನಿಧಿಯಲ್ಲಿ ಶ್ರೀವ್ಯಾಸರಾಜರು –

ಒಮ್ಮೆ ತಿರುಪತಿಯಲ್ಲಿದ್ದ ಅರ್ಚಕರು ಸ್ವಚ್ಛಂದ ಪ್ರವೃತ್ತಿ ಹೆಚ್ಚಿ, ದೇವಾಲಯದ ನೈವೇದ್ಯವನ್ನು ಮಾರಿ ಹಣ ಮಾಡಿಕೊಳ್ಳತೊಡಗಿದರು, ದೇವಾಲಯದ ಒಡವೆ ವಸ್ತುಗಳನ್ನು ತಮ್ಮ ಮಡದಿ, ಮಕ್ಕಳಿಗೆ ಹಾಕಿ ಅಲಂಕರಿಸಿಕೊಂಡರು, ಚಿನ್ನ, ಬೆಳ್ಳಿ, ಒಡವೆಗಳನ್ನು ತಮ್ಮ ಮನೆಯ ಮದುವೆ ಮುಂಜಿ ಸಮಾರಂಭಕ್ಕೆ ವಿನಿಯೋಗಿಸಿಕೊಳ್ಳುತ್ತಿದ್ದರು. ಸಾಳ್ವ ನರಸಿಂಹನು ಆ ಅನ್ಯಾಯವನ್ನು ಕಂಡು ಕೋಪಗೊಂಡು ಅವರನ್ನೆಲ್ಲಾ ಸಂಹರಿಸಿದ್ದರಿಂದ ಬ್ರಹ್ಮಹತ್ಯಾದೋಷ ನಿವಾರಣೆಗಾಗಿ ಶ್ರೀಪಾದರಾಜರಲ್ಲಿ ಬಂದು ಬೇಡಿದಾಗ, ಅದನ್ನು ಪರಿಹಾರ ಮಾಡಿಸಿದರು ಶ್ರೀಪಾದರಾಜರು. ಆ ಸಮಯದಲ್ಲಿ ತಿರುಪತಿಯಲ್ಲಿ ದೇವರ ಪೂಜೆಗೆ ಅರ್ಹ ಆ ಮನೆತನದ ಬ್ರಾಹ್ಮಣರಾರು ಇಲ್ಲದ ಸಂದರ್ಭದಲ್ಲಿ ಶ್ರೀವ್ಯಾಸರಾಜರು ೧೨ ವರ್ಷಕಾಲ ತಿಮ್ಮಪ್ಪನ ಪೂಜೆ ಸಲ್ಲಿಸಿದರು. ತಮ್ಮ ತಪಶ್ಶಕ್ತಿಯಿಂದ ಮತ್ತೆ ಪ್ರತಿಮೆಯಲ್ಲಿ ಸಾನ್ನಿಧ್ಯವನ್ನು ತಂದರು.

**ಕೃಷ್ಣದೇವರಾಯನಿಗೆ ಅನೇಕ ಜನ ಧರ್ಮಗುರುಗಳಿದ್ದರೂ, ಪ್ರಪ್ರಥಮ ಪುರಸ್ಕಾರ, ಗೌರವಕ್ಕೆ ಭಾಜನರಾಗಿದ್ದವರು – ಶ್ರೀವ್ಯಾಸರಾಜರು.** ತಾವು ತಿರುಪತಿ ಶ್ರೀನಿವಾಸನ ಕೈಂಕರ್ಯ ನಡೆಸುತ್ತಿದ್ದ

ಕಾಲದಲ್ಲಿ ಪ್ರತಿದಿನ ಪಾಠ, ಪ್ರವಚನ, ಪೂಜೆ, ವಿದ್ವತ್ ಸಭೆಗಳನ್ನು ನಡೆಸುತ್ತಿದ್ದ ಗುರುಗಳು ತಮ್ಮಿಂದ ಸಮಗ್ರ ಸಾಮ್ರಾಜ್ಯ ಸಂರಕ್ಷಣೆ ಹಾಗೂ ಹಿಂದೂ ಧರ್ಮದ ಪುನರುತ್ಥಾನದ ಮಹಾಕಾರ್ಯಗಳು ನಡೆಯಬೇಕೆಂಬುದನ್ನು ಅರಿತು, ವಿಜಯನಗರದತ್ತ ಹೊರಡಲು ನಿರ್ಧರಿಸಿದಾಗ, ಅರ್ಚಕ ತಾತಾಚಾರ್ಯರ ವಂಶೀಕ ಮಗುವೊಬ್ಬ ಉಳಿದುದನ್ನು ತಿಳಿದು, ಅವನನ್ನು ಕರೆಸಿ, ಆ ಬಾಲಕನಿಗೆ ಉಪನಯಾದಿ ಸಂಸ್ಕಾರಗಳನ್ನು ಮಾದಿ, ಆಗಮೋಕ್ತ ಪೂಜಾಪದ್ಧತಿಯನ್ನು ತಿಳಿಸಿ ಶ್ರೀನಿವಾಸನ ಕೈಂಕರ್ಯವನ್ನು ಅವನಿಗೊಪ್ಪಿಸಿದರು.

ವ್ಯಾಸರಾಜರು ಮನಸ್ಸು ಮಾಡಿದ್ದರೆ ಇಡೀ ತಿರುಪತಿಯ ವೈಭೋಗದ ಪೂಜೆಯನ್ನು ತಮ್ಮ ಮಠಕ್ಕೇ ಇಟ್ಟುಕೊಂಡು ಮಾಧ್ವ ಸಮುದಾಯಕ್ಕೆ ಅರ್ಪಿಸಬಹುದಿತ್ತು. ಆದರೆ ಬಹಳ ಕರುಣಾಶಾಲಿಗಳಾದ ಅವರು ಹಾಗೆ ಮಾಡದೆ, ವಾಪಸ್ಸು ಶ್ರೀವೈಷ್ಣವಮನೆತನಕ್ಕೇ ಕೊಟ್ಟರು.

**ಕೃಷ್ಣದೇವರಾಯನ ಕುಹುಯೋಗ ಪರಿಹಾರ** – ವಿಜಯನಗರದಲ್ಲಿ ಕೃಷ್ಣದೇವರಾಯನಿಗೆ ರಾಜಕಾರಣದಲ್ಲಿ ಮಹಾಮಂತ್ರಿ ತಿಮ್ಮರಸುವಿದ್ದಂತೆ, ಧರ್ಮಕಾರಣದಲ್ಲಿ ಶ್ರೀವ್ಯಾಸರಾಜರು ಸಾಮ್ರಾಜ್ಯದ ರಾಜಗುರುಗಳಾಗಿದ್ದರು

ತಮ್ಮ ಕಾವಿಯನ್ನು ಆ ಒಂದು ಘಳಿಗೆ ಸಿಂಹಾಸನದಲ್ಲಿರಿಸಿ, ಕೃಷ್ಣದೇವರಾಯನ ಕುಹುಯೋಗ ಪರಿಹಾರ ಮಾಡಿದರಿಂದ ಬಹಳ ಸಂತೋಷಗೊಂಡ ಶ್ರೀಕೃಷ್ಣದೇವರಾಯರು ತನ್ನ ಸಮಸ್ತ ರತ್ನ, ವೈಡೂರ್ಯಾದಿ ಅಲಂಕರಣ ಸಾಮಗ್ರಿಗಳಿಂದ ರತ್ನಾಭಿಷೇಕ ಮಾಡಿದನು. ಶ್ರೀವ್ಯಾಸರಾಜರು ಆ ಸಮಸ್ತ ರತ್ನರಾಶಿಗಳನ್ನೂ ಅಲ್ಲಿದ್ದವರೆಲ್ಲರಿಗೂ ದಾನಮಾಡಿದರು.

**ಪಕ್ಷಧರಮಿಶ್ರನೊಡನೆ ವಾಗ್ವಾದ** – **ಶತ್ರುವಿನಿಂದಲೇ ಪ್ರಶಂಸೆ –**

ಉತ್ತರಭಾರತ ಸಂಚಾರದಲ್ಲಿ ವ್ಯಾಸರಾಜರು ಪಕ್ಷಧರಮಿಶ್ರನೊಡನೆ ನಡೆಸಿದ ವಾದ ಐತಿಹಾಸಿಕವೆನಿಸಿತು. ಪಕ್ಷಧರಮಿಶ್ರ ಇಮ್ಮಡಿ ಜಯದೇವ ಎಂಬ ಪ್ರಶಸ್ತಿಗೆ ಭಾಜನನಾಗಿದ್ದವನು. ಇವನಿಗೆ "ಪೀಯೋಷವರ್ಷ" ಎಂಬ ಹೆಸರೂ ಇತ್ತು. ಇವನು ಹಲವಾರು ಗ್ರಂಥಗಳನ್ನೂ, ನಾಟಕಗಳನ್ನೂ, ಕಾವ್ಯಗಳನ್ನೂ ರಚಿಸಿದ್ದನು. ವ್ಯಾಸರಾಜರು ಅವನೊಂದಿಗೆ ೧೦ ದಿನಗಳ ಕಾಲ ವಾಗ್ವಾದ ಮಾಡಿ ಅವನನ್ನು ಸಂಪೂರ್ಣವಾಗಿ ಸೋಲಿಸಿ, ಕಡೆಗೆ ಅವನು ವ್ಯಾಸರಾಜರಿಗೆ

ದೀರ್ಘದಂಡಪ್ರಣಾಮ ಮಾಡಿ ತನ್ನನ್ನು ತಮ್ಮ ಶಿಷ್ಯರನ್ನಾಗಿ ಅಂಗೀಕರಿಸಬೇಕೆಂದು ಕೋರಿದನು. ಅವನು ವ್ಯಾಸರಾಜರನ್ನು ನಿಮ್ಮ ಗುರುಗಳು ಯಾರು ಎಂದು ವಿಚಾರಿಸಲು, ನಂತರ ಶ್ರೀಪಾದರಾಜರಲ್ಲಿಗೆ ಬಂದು "ವ್ಯಾಸರಾಜರು ನಾನು ಓದಿರುವುದನ್ನೆಲ್ಲಾ ಓದಿದ್ದಾರೆ, ಓದದೇ ಇರುವುದನ್ನೂ ಓದಿದ್ದಾರೆ, ಈ ಪಕ್ಷಧರಮಿಶ್ರನ ಹೆಗ್ಗಳಿಕೆಯಾಗಿದ್ದ ಎರಡು ಪಕ್ಷಗಳನ್ನು ತಮ್ಮ ವಗ್ವಜ್ರಪ್ರಹಾರದಿಂದ ಕತ್ತರಿಸಿದ ಅವರು ಕೇವಲ ವ್ಯಾಸರಾಜರಲ್ಲ, ಅಭಿನವ ವ್ಯಾಸರೇ ಸರಿ" ಎಂದು ಪ್ರಶಂಶಿಸಿದನು.

❖ ನವಕೋಟಿ ನಾರಾಯಣರೆಂತೆನಿಸಿದ್ದ ಶ್ರೀನಿವಾಸನಾಯಕರಿಗೆ ದಾಸದೀಕ್ಷೆ ಇತ್ತು "ಪುರಂದರದಾಸ"ರೆಂದು ಕರೆದು, ಅವರು ಅಲಕ್ಷಕ್ಕೂ ಹೆಚ್ಚು ದೇವರನಾಮಗಳನ್ನು ರಚಿಸಲು ಸ್ಫೂರ್ತಿಯಾದರು. ಪುರಂದರದಾಸರು ಬರೆದ ದೇವರನಾಮಗಳನ್ನು ತಮ್ಮ ವೇದವ್ಯಾಸಗ್ರಂಥದ ಜೊತೆಗೇ ಇಟ್ಟು "ಪುರಂದರೋಪನಿಷತ್" ಎಂದರು. ಮುಂದೆ ಕೃಷ್ಣದೇವರಾಯನ ಮುಖಾಂತರ ಪುರಂದರಮಂಟಪವೆನ್ನುವ ಶಿಲಾಮಂಟಪವೊಂದನ್ನು ಏರ್ಪಡಿಸಿ ಪುರಂದರದಾಸರ ಜಪ–ತಪಕ್ಕೆ ಅನುಕೂಲ ಮಾಡಿಕೊಟ್ಟರು.

❖ ಕನಕದಾಸರಿಗೆ ಆಶ್ರಯವಿತ್ತರು. ಜಾತಿಯಲ್ಲಿ ಕೀಳಜಾತಿಯವನಾದರೂ ಕನಕದಾಸರನ್ನು ಪುರಂದರದಾಸರ ಸರಿಸಮವಾಗೇ ಕಂಡರು. ಇದರಿಂದ ತಮ್ಮ ಕೆಲವು ಶಿಷ್ಯರಲ್ಲಿ ಅಸಮಾಧಾನಗೊಂಡರೂ ಕನಕನನ್ನು ಬಿಡಲಿಲ್ಲ. ವ್ಯಾಸರಾಜರು ಕನಕನಲ್ಲಿ ಕಂಡದ್ದು ಅವನ ಅಪಾರವಾದ ಭಕ್ತಿ ವೈರಾಗ್ಯವೇ ಹೊರತು ಜಾತಿಯನ್ನಲ್ಲ.

❖ ವ್ಯಾಸರಾಜರು ತಮ್ಮ ಪರಮ ಆಪ್ತ ಶಿಷ್ಯನಾಗಿದ್ದ ವಿಷ್ಣುತೀರ್ಥರನ್ನು ಸುರೇಂದ್ರರಿಗೆ ನೀಡಿದರು. ಆ ವಿಷ್ಣುತೀರ್ಥರೇ ವಾದಿಸಿಂಹರಾಗಿದ್ದ, ೧೦೪ ಗ್ರಂಥಗಳನ್ನು ಬರೆದ, ಸಕಲವಿದ್ಯಾಪ್ರಾವೀಣ್ಯತೆ ಹೊಂದಿದ್ದ ಕುಂಭಕೋಣದಲ್ಲಿ ವಿರಾಜಮಾನರಾಗಿರುವ ವಿಜಯೀಂದ್ರರು.